ಪ್ರೇಮ್‌ಚಂದ್ ಅವರ 'ಗೋದಾನ್' ಕಾದಂಬರಿಯಲ್ಲಿ ಭಾರತೀಯ ರೈತರ ಸಮಕಾಲೀನ ಸಮಸ್ಯೆಗಳ ಚಿತ್ರಣ

ಉಮೇಶ

ಸಹ ಪ್ರಾಧ್ಯಾಪಕ, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಳೆನರಸೀಪುರ, ಹಾಸನ ಜಿಲ್ಲೆ.

DOI: https://doi.org/10.5281/zenodo.17013707

ABSTRACT:

ಗೋದಾನ ಕಾದಂಬರಿಯಲ್ಲಿ ಪ್ರೇಮ್‌ಚಂದ್ ಅವರು ರೈತರು, ಕಾರ್ಮಿಕರು ಮತ್ತು ಮಹಿಳೆಯರನ್ನು ಚಿತ್ರಿಸಿರುವ ರೀತಿ ಆ ಕಾಲಘಟ್ಟದ ಸಮಾಜದ ಸಾಮಾಜಿಕ, ಆರ್ಥಿಕ ಸಮಸ್ಯೆಗಳ ಪ್ರತಿಬಿಂಬ ಮಾತ್ರವಲ್ಲದೆ ಸಮಕಾಲೀನ ಸಮಾಜದಲ್ಲಿ ಇಂದಿಗೂ ಪ್ರಸ್ತುತವಾಗಿದೆ. ಪ್ರಸ್ತುತ ಕಾಲಮಾನದಲ್ಲಿಟ್ಟು ಕಾದಂಬರಿಯನ್ನು ಅವಲೋಕಿಸಿದಾಗ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ರೈತರ, ಮಹಿಳೆಯರ, ಕಾರ್ಮಿಕರ ಸ್ಥಿತಿಗತಿಗಳು ನಿರೀಕ್ಷಿತ ಪ್ರಮಾಣದಲ್ಲಿ ಬದಲಾವಣೆ ಆಗದೆ ಇರುವುದು ಸ್ಪಷ್ಟ. ರೈತರ ಜೀವನವು ಮುಖ್ಯವಾಗಿ ಆರ್ಥಿಕ ಮತ್ತು ನೈಸರ್ಗಿಕ ಸಮಸ್ಯೆಗಳಿಂದ ಆವರಿಸಲ್ಪಟ್ಟಿದೆ. ಪ್ರತಿದಿನ ನಾವು ರೈತರ ಮತ್ತು ಮಹಿಳೆಯರ ದಯನೀಯ ಸ್ಥಿತಿಯನ್ನು ಕಣ್ಣಾರೆ ಕಾಣುತ್ತೇವೆ. ಆದ್ದರಿಂದ ಪ್ರಸ್ತುತ ಲೇಖನದಲ್ಲಿ ವಿಸ್ತೃತವಾಗಿ ಇದರ ಬಗ್ಗೆ ಚರ್ಚಿಸಿ, ವಿಶ್ಲೇಷಿಸಲಾಗಿದೆ.

KEYWORDS:

ಗೋದಾನ್, ರೈತರ ಸ್ಥಿತಿಗತಿ, ಗ್ರಾಮೀಣ ಜನರ ಶೋಷಣೆ, ಬಾಲ್ಯ ವಿವಾಹ, ಸಮಾಜ, ಮಹಿಳಾ ಶೋಷಣೆ.

ಮುನ್ಷಿ ಪ್ರೇಮ್‌ಚಂದ್ ವಾರಣಾಸಿ ಜಿಲ್ಲೆಯ ಲಮಾಹಿ ಗ್ರಾಮದಲ್ಲಿ 1880 ರಲ್ಲಿ ಜನಿಸಿದರು. ಇವರ ಬಾಲ್ಯದ ಹೆಸರು ಧನಪತ್‌ರಾಯ್. ಆದರೆ ಅವರು ತಮ್ಮ ಕಥೆಗಳನ್ನು ಉರ್ದು ಭಾಷೆಯಲ್ಲಿ 'ನವಾಬ್‌ರಾಯ್' ಎಂಬ ಹೆಸರಿನಲ್ಲಿ ಪ್ರಾರಂಭಿಸಿ ತದನಂತರ ಹಿಂದಿಯಲ್ಲಿ 'ಮುನ್ಷಿ ಪ್ರೇಮ್‌ಚಂದ್' ಹೆಸರಿನಲ್ಲಿ ಬರೆದಿದ್ದಾರೆ. ಪ್ರೇಮ್‌ಚಂದ್ ಅವರು ಹಿಂದಿ ಮತ್ತು ಉರ್ದು ಭಾಷೆಗಳ ಸಾಮಾಜಿಕ ಕಾದಂಬರಿಗಳ ಪ್ರವರ್ತಕರಾಗಿದ್ದಾರೆ. 19ನೇ ಶತಮಾನದ ದಶಕಗಳ ಉತ್ತರಾರ್ಧದಲ್ಲಿ ಸಮಾಜದಲ್ಲಿ ಪ್ರಚಲಿತದಲ್ಲಿದ್ದ ಜಾತಿಪದ್ಧತಿ, ಮಹಿಳೆಯರು ಮತ್ತು ಕಾರ್ಮಿಕರ ದುಃಸ್ಥಿತಿ ಮತ್ತು

ಶೋಷಣೆಗಳ ಬಗ್ಗೆ ಬರೆದ ಮೊದಲ ಲೇಖಕರಾಗಿದ್ದಾರೆ. ಕಾದಂಬರಿಕಾರರಾಗಿ, ಕತೆಗಾರರಾಗಿ ಪ್ರಸಿದ್ಧರಾಗಿರುವ ಪ್ರೇಮ್‌ಚಂದ್ ಅವರನ್ನು ಹಿಂದಿ ಸಾಹಿತ್ಯ ವಲಯವು 'ಉಪನ್ಯಾಸ್ ಸಾಮ್ರಾಟ್' (ಕಾದಂಬರಿಕಾರರಲ್ಲಿ ಚಕ್ರವರ್ತಿ) ಎಂದು ಕರೆದಿದ್ದಾರೆ. 300 ಸಣ್ಣ ಕಥೆಗಳು, 13 ಕ್ಕೂ ಹೆಚ್ಚಿನ ಕಾದಂಬರಿಗಳು ಮತ್ತು ಹಲವಾರು ಪ್ರಬಂಧಗಳನ್ನು ಬರೆದಿರುವ ಇವರ ಸಾಹಿತ್ಯವು ಅನೇಕ ದೇಶಿಯ ಮತ್ತು ವಿದೇಶಿಯ ಭಾಷೆಗಳಿಗೆ ಅನುವಾದಗೊಂಡಿವೆ.

'ಗೋದಾನ್' ಪ್ರೇಮ್‌ಚಂದ್ ಅವರ ಹಿಂದಿ ಕಾದಂಬರಿ. ಈ ಕಾದಂಬರಿಯನ್ನು 1936ರಲ್ಲಿ ಪ್ರಕಟಿಸಲಾಗಿದೆ. ಈ ಕಾದಂಬರಿಯನ್ನು ಆಧುನಿಕ ಭಾರತೀಯ ಸಾಹಿತ್ಯದ ಶ್ರೇಷ್ಠ ಹಿಂದಿ ಕಾದಂಬರಿಗಳಲ್ಲಿ ಒಂದೆಂದು ಪರಿಗಣಿಸಲಾಗಿದೆ. ಕಾದಂಬರಿಯ ಮುಖ್ಯ ವಿಷಯವು ಭಾರತೀಯ ರೈತರ ಸ್ಥಿತಿಗತಿಗಳನ್ನು ಆಧಾರವಾಗಿಟ್ಟುಕೊಂಡು ರಚಿತವಾಗಿದೆ. ಕಾದಂಬರಿಯ ಮುಖ್ಯ ಉದ್ದೇಶವು ತಮ್ಮ ಕಾಲಘಟ್ಟದಲ್ಲಿನ ಸಾಮಾಜಿಕ, ಆರ್ಥಿಕ ಅಭಾವ, ಭಾರತೀಯ ಮೇಲ್ವರ್ಗದ ಸಮುದಾಯಗಳಿಂದ ಗ್ರಾಮೀಣ ಜನರ ಶೋಷಣೆ, ಸಮಾಜದಲ್ಲಿನ ಮಹಿಳೆಯರ ಸ್ಥಿತಿಗತಿಗಳು, ಬಾಲ್ಯವಿವಾಹ, ವರದಕ್ಷಿಣೆ, ಭೂಮಾಲೀಕರು, ಹಣ ಲೇವಾದೇವಿಗಾರರು, ಪುರೋಹಿತಶಾಹಿಗಳು ಮತ್ತು ವಸಾಹತುಶಾಹಿ ಅಧಿಕಾರಿಗಳ ದಬ್ಬಾಳಿಕೆಯನ್ನು ಅನಾವರಣಗೊಳಿಸುವುದಾಗಿದೆ. ಸಾಲದ ಬಲೆಯಲ್ಲಿ ಸಿಲುಕಿರುವ ಹಳ್ಳಿಯ ಬಡರೈತನ ಕರುಣಾಜನಕ ಕಥೆಯನ್ನು ಈ ಕಾದಂಬರಿಯು ಕೇಂದ್ರೀಕರಿಸಿದೆ.

ಕಥಾವಸ್ತು: ಈ ಕಾದಂಬರಿಯ ಕಥೆಯು ಭಾರತದಲ್ಲಿರುವ ವಿವಿಧ ಸಮುದಾಯಗಳ ವರ್ಗಗಳನ್ನು ಪ್ರತಿನಿಧಿಸುತ್ತದೆ. 'ಹೋರಿ ಮೆಹತೋ' ಕಥಾನಾಯಕನಾಗಿದ್ದಾನೆ. ಅವರ ಕುಟುಂಬದಲ್ಲಿ ಆತನ ಪತ್ನಿ ಧನಿಯಾ, ಮಗ ಗೋಬರ್, ಪುತ್ರಿಯರಾದ ರೂಪ ಮತ್ತು ಸೋನಾ ಹಾಗೂ ಸೊಸೆ ಜೂನಿಯಾ ಇದ್ದಾರೆ. ಹೋರಿ ಮೆಹತೋ ಎಲ್ಲಾ ರೈತರಂತೆ ತಾನು ಕೂಡ ಒಂದು ಹಸುವನ್ನು ಹೊಂದುವ ಬಯಕೆಯೊಂದಿಗೆ ಗೋಪಾಲಕನಾದ ಬೋಲಾನಿಂದ 80 ರೂಪಾಯಿ ಸಾಲದ ಮೇಲೆ ಹಸುವನ್ನು ಖರೀದಿಸುತ್ತಾನೆ. ಕುಟುಂಬ ವಿಭಜನೆಯ ಸಂದರ್ಭದಲ್ಲಿ ಹೋರಿ ತನ್ನ ಸಹೋದರ ಹೀರಾನಿಗೆ ಹತ್ತು ರೂಪಾಯಿಗಳನ್ನು ವಂಚಿಸಲು ಪ್ರಯತ್ನಿಸುತ್ತಾನೆ. ಇದು ಹೋರಿಯ ಪತ್ನಿ ಮತ್ತು ಹೀರಾನ ಪತ್ನಿಯ ನಡುವೆ ಜಗಳಕ್ಕೆ ಕಾರಣವಾಗುತ್ತದೆ. ಈ ಸಂದರ್ಭದಲ್ಲಿ ಕೋಪ, ಅಸೂಯೆಯಿಂದ ಕೂಡಿದ ಹೀರಾ ಹಸುವಿಗೆ ವಿಷ ಹಾಕಿ ಸಾಯಿಸಿ, ಪೊಲೀಸರ ಕ್ರಮಕ್ಕೆ ಹೆದರಿ ಪಲಾಯನ ಮಾಡುತ್ತಾನೆ. ಹಸುವಿನ ಸಾವಿನ ಬಗ್ಗೆ ಪೊಲೀಸರು ವಿಚಾರಣೆಗೆ ಬಂದಾಗ ಹೋರಿಯು ಸಾಲ ಪಡೆದು ಹೀರಾನ ಹೆಸರನ್ನು ತೆರವುಗೊಳಿಸಲು ಪೊಲೀಸರಿಗೆ ಲಂಚ ನೀಡುವುದರ ಮುಖೇನ ಮತ್ತೆ ಸಾಲದ ಬಲೆಗೆ ಸಿಲುಕಿಕೊಳ್ಳುತ್ತಾನೆ.

ಜೂನಿಯಾ ಬೋಲಾನ ವಿಧವೆ ಮಗಳು. ಈಕೆ ಗೋಬರ್ ಜೊತೆ ಸಂಬಂಧ ಬೆಳೆಸಿ ಆತನಿಂದ ಗರ್ಭಿಣಿಯಾದ ನಂತರ ಅವನೊಂದಿಗೆ ಬರುತ್ತಾಳೆ. ಈ ಸಾಮಾಜಿಕ ಘಟನೆಯಿಂದ ಗ್ರಾಮಸ್ಥರ ಪ್ರತಿಕ್ರಿಯೆಗೆ ಹೆದರಿದ ಗೋಬರ್ ಹಳ್ಳಿ ಬಿಟ್ಟು ನಗರಕ್ಕೆ ವಲಸೆ ಹೋಗುತ್ತಾನೆ. ಆದರೆ ಹೋರಿ ಮತ್ತು ಆತನ ಪತ್ನಿ ಜೂನಿಯಾಳು ಗರ್ಭಿಣಿ ಆಗಿರುವುದರಿಂದ ಸೊಸೆಯಾಗಿ ಸ್ವೀಕರಿಸಿ ಮನೆಗೆ ಕರೆದು ತಂದು ಆಶ್ರಯ ನೀಡುತ್ತಾರೆ. ಜೂನಿಯಾಳಿಗೆ ಆಶ್ರಯ ನೀಡಿದ್ದಕ್ಕಾಗಿ ಅಲ್ಲಿನ ಗ್ರಾಮ ಪಂಚಾಯಿತಿ ಹೋರಿಗೆ ದಂಡ ವಿಧಿಸುತ್ತದೆ. ಹೋರಿ ಮತ್ತೆ ಸಾಲ ಪಡೆದು ದಂಡ ಕಟ್ಟುತ್ತಾನೆ. ಹೀಗೆ ಹೋರಿ ಮೆಹತೋ ಲೇವಾದೇವಿಗಾರರಿಂದ ದೊಡ್ಡ ಮಟ್ಟದಲ್ಲಿ ಸಾಲ ಮಾಡುತ್ತಾನೆ. ಅಂತಿಮವಾಗಿ ತಮ್ಮ ಪೂರ್ವಿಕರು ಭೂಕಂದಾಯ ಪಾವತಿಸದ ಕಾರಣದಿಂದಾಗಿ ಜಮೀನನ್ನು ಹರಾಜಿನಿಂದ ತಪ್ಪಿಸುವ ಸಲುವಾಗಿ ಕೇವಲ 200 ರೂಪಾಯಿಗೆ ತನ್ನ ಮಗಳು ರೂಪಾಳನ್ನು ಮದುವೆಯಾಗಲು ಅಳಿಯನಿಗೆ ಒತ್ತಾಯಿಸುತ್ತಾನೆ. ಆದರೆ ವರದಕ್ಷಿಣೆ ರೂಪದ 200 ರೂಪಾಯಿಗಳು ಮರುಪಾವತಿಸಲು ಮತ್ತು ಮೊಮ್ಮಗನಿಗೆ ಹಾಲು ಕೊಡಲು ಹಸುವನ್ನು ಹೊಂದುವ ಆತನ ಸಂಕಷ್ಟ ಅತಿಯಾದ ಕಾರಣ ಹೋರಿಯ ಸಾವಿಗೆ ಕಾರಣವಾಗುತ್ತದೆ. ಹೋರಿಯು ಸಾವಿನ ಸಮೀಪದಲ್ಲಿರುವಾಗ ಆತನ ಪತ್ನಿ ಧನಿಯಾ ತನ್ನ ಬಳಿ ಇರುವ ಎಲ್ಲಾ ಹಣವನ್ನು ಸಂಪ್ರದಾಯವನ್ನು ಪೂರೈಸಲು ಪುರೋಹಿತರಿಗೆ ಹಸ್ತಾಂತರಿಸುತ್ತಾಳೆ. ಹಿಂದೂ ಧರ್ಮದಲ್ಲಿ ಹಸುವನ್ನು ದಾನ ಮಾಡುವುದು ಒಂದು ಪ್ರಮುಖ ಧಾರ್ಮಿಕ ಕಾರ್ಯವೆಂದು ಪರಿಗಣಿಸಲ್ಪಟ್ಟಿರುವುದರಿಂದ ಹೋರಿ ತನ್ನ ಜೀವನದ ಕೊನೆಯಲ್ಲಿ ಹಸುವನ್ನು ದಾನ ಮಾಡುವ ಕನಸನ್ನು ಕಂಡನು. ಆದರೆ ಅವನ ಆರ್ಥಿಕ ಸ್ಥಿತಿ ತುಂಬಾ ಹದಗೆಟ್ಟಿರುವ ಹಿನ್ನೆಲೆಯಲ್ಲಿ ಅದನ್ನು ಈಡೇರಿಸಲು ಸಾಧ್ಯವಾಗಲಿಲ್ಲ. ಆತನ ಸಾವು ಭಾರತೀಯ ರೈತರ ದುಸ್ಥಿತಿಯನ್ನು ಇನ್ನಷ್ಟು ಶೋಚನೀಯಗೊಳಿಸುವ ವಾಸ್ತವ ದುರಂತವನ್ನು ಪ್ರತಿನಿಧಿಸುತ್ತದೆ.

ಕಾದಂಬರಿಯ ವಿಶ್ಲೇಷಣೆ: ಪ್ರೇಮ್‌ಚಂದ್ ಅವರ ಕೊನೆಯ ಕಾದಂಬರಿಯಾದ 'ಗೋದಾನ್' ಭಾರತೀಯರು ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿರುವ ಸಮಯದಲ್ಲಿ ಮತ್ತು ಭಾರತೀಯ ಸಮಾಜವು ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಸಮಸ್ಯೆಗಳನ್ನು ಎದುರಿಸುತ್ತಿರುವ ಸಮಯದಲ್ಲಿ ರಚಿಸಲ್ಪಟ್ಟಿದೆ. ಈ ಕಾದಂಬರಿಯು ಬಡರೈತನ ಜೀವನದ ವಾಸ್ತವ ಚಿತ್ರಗಳನ್ನು ಹೊರಹಾಕಿದೆ. ಇದು ಭಾರತೀಯ ರೈತರ ಆರ್ಥಿಕ ಪರಿಸ್ಥಿತಿಗಳನ್ನು ಪತ್ತೆಹಚ್ಚುವ ಸಾಮಾಜಿಕ ದಾಖಲೆಯನ್ನು ರೂಪಿಸುತ್ತದೆ. ಹಾಗೂ ಕೆಳಜಾತಿಗಳು ಮತ್ತು ಮೇಲ್ಜಾತಿಗಳ ನಡುವಿನ ಭಿನ್ನಾಭಿಪ್ರಾಯದಿಂದ ಹೊರಹೊಮ್ಮುವ ಹಿಂಸಾಚಾರದ ಮೇಲೆ ಬೆಳಕು ಚೆಲ್ಲುತ್ತದೆ. ಮೇಲ್ಜಾತಿಗಳು ಮತ್ತು ಕೆಳಜಾತಿಗಳಿಗೆ ನಿಗದಿಪಡಿಸಿದ ಸಾಮಾಜಿಕ ಮಾನದಂಡಗಳು

ಮತ್ತು ನಿಯಮಗಳಿಂದ ಕೆಳಜಾತಿಗಳಿಗೆ ಮಾಡಿದ ಅನ್ಯಾಯವನ್ನು ಈ ಕಾದಂಬರಿ ಮುಕ್ತವಾಗಿ ಅನಾವರಣ ಮಾಡಿದೆ. 20ನೇ ಶತಮಾನದ ಸಂಪ್ರದಾಯವಾದಿ ಸಮಾಜ ಮತ್ತು ಭಾರತೀಯ ರೈತರ ಅದ್ಭುತ ಚಿತ್ರಣವನ್ನು ಈ ಕೃತಿ ನೀಡುತ್ತದೆ. ರೈತನೊಬ್ಬ ತನ್ನ ಕುಟುಂಬವನ್ನು ಪೋಷಿಸಲು ಶ್ರೀಮಂತರು, ಸಾಲದಾತರು, ಭೂಮಾಲೀಕರು ಮುಂತಾದವರ ಶೋಷಣೆಗೆ ಬಲಿಯಾಗಿ ತನ್ನ ಇಡೀ ಜೀವನವನ್ನು ಭಯ ಮತ್ತು ಹತಾಶೆಯಲ್ಲಿ ಕಳೆಯುವುದನ್ನು ನೋಡಬಹುದಾಗಿದೆ. ಈ ಕೃತಿಯನ್ನು ಅಧ್ಯಯನ ಮಾಡುವಾಗ ನಮ್ಮ ಜೀವನದ ಅಥವಾ ಸುತ್ತಮುತ್ತಲಿನ ಸಮಕಾಲೀನ ಸಮಾಜದಲ್ಲಿನ ಪರಿಸರದಲ್ಲಿ ಮುಳುಗಿರುವ ಹಾಗೆ ನಮಗೆ ಭಾಸವಾಗುವುದರಲ್ಲಿ ಆಶ್ಚರ್ಯವಿಲ್ಲ.

ಪ್ರೇಮ್‌ಚಂದ್ ಅವರು 'ಹೋರಿ ಮೆಹತೋ' ಎಂಬ ಸಾಮಾನ್ಯ ರೈತನ ಚಿತ್ರಣದ ಮೂಲಕ ಬಡ ಅನಕ್ಷರಸ್ಥ ರೈತನ ದುಃಸ್ಥಿತಿಗೆ ನಮ್ಮ ಗಮನವನ್ನು ಕೇಂದ್ರೀಕರಿಸುತ್ತಾರೆ. ಕಥಾನಾಯಕ ಹೋರಿ ತನ್ನ ಅಲ್ಪಸಂಪಾದನೆಯಿಂದ ತನ್ನ ಕುಟುಂಬವನ್ನು ಪೋಷಿಸುವ ನಡುವೆ ಸಿಕ್ಕಿಹಾಕಿಕೊಂಡಿದ್ದಾನೆ. ಮತ್ತೊಂದೆಡೆ ಅಧಿಕಾರಿಗಳಿಗೆ ಹಲವಾರು ಸಾಲಗಳನ್ನು ತೀರಿಸಲು ಪ್ರಯತ್ನಿಸುತ್ತಾನೆ. ಇವರು ವ್ಯವಸ್ಥೆಯ ವಿರುದ್ಧ ಪ್ರತಿಭಟಿಸಲು ಸಾಧ್ಯವಿಲ್ಲ. 'ಹೋರಿ ಮೆಹತೋ' ಭಾರತೀಯ ರೈತರ ಮೂಲಭೂತ ಗುಣಲಕ್ಷಣಗಳನ್ನು ಪ್ರತಿನಿಧಿಸುವ ವಿಶಿಷ್ಟ ಪಾತ್ರ. ರೈತರು ಭೂಮಾಲೀಕರು ಮತ್ತು ಲೇವಾದೇವಿಗಾರರ ವಶವಾಗಿದ್ದಾರೆ. ಬಡತನವು ಭಾರತೀಯ ಹಳ್ಳಿಗರಿಗೆ ದೊಡ್ಡ ಸಮಸ್ಯೆಯಾಗಿದೆ. ಬಡತನದ ಪರಿಣಾಮಗಳು ಅವರು ಸಾಲ ಮಾಡುವ ವ್ಯವಸ್ಥೆಯಲ್ಲಿ ಸಿಲುಕುವಂತೆ ಮಾಡುತ್ತವೆ. ರೈತರು ಮತ್ತು ಅವರ ಕುಟುಂಬಗಳನ್ನು ಕೆಟ್ಟದಾಗಿ ಶೋಷಿಸುವ ಚಿತ್ರಣದ ಹಿಂದೆ ಬಹಳ ಪ್ರಮುಖವಾದ ಸಾಮಾಜಿಕ, ಆರ್ಥಿಕ ಅಂಶಗಳು ಕಾರಣಗಳಾಗಿವೆ.

ಗೋದಾನ್ ಕಾದಂಬರಿಯ ವಿಷಯಗಳು ಸಾರ್ವತ್ರಿಕ ಮತ್ತು ಕಾಲಾತೀತವಾಗಿವೆ. ಬಡವರ ಹೋರಾಟಗಳು ಮತ್ತು ಶ್ರೀಮಂತರಿಂದ ಅವರ ಶೋಷಣೆ ಇನ್ನೂ ಸಮಾಜದಲ್ಲಿ ಪ್ರಚಲಿತದಲ್ಲಿದೆ. ಪ್ರಸ್ತುತ ಕಾದಂಬರಿ ಬ್ರಿಟಿಷ್ ಆಳ್ವಿಕೆಯಲ್ಲಿ ರೈತರ ದುಃಸ್ಥಿತಿ ಮೇಲೆ ಬೆಳಕು ಚೆಲ್ಲುವುದಲ್ಲದೆ ಅದರ ಕಾಲಾತೀತ ಪಾತ್ರವು ಇಂದಿನ ಕಾಲದಲ್ಲೂ ಪ್ರಸ್ತುತವಾಗಿರಲು ಅನುವು ಮಾಡಿಕೊಡುತ್ತದೆ. ರೈತರು ಇನ್ನೂ ಸಾಲದ ಹೊರೆಯಿಂದ ಸಾವನ್ನಪ್ಪುತ್ತಿದ್ದಾರೆ. ಅವರು ಶಾಂತಿ ಮತ್ತು ನೆಮ್ಮದಿಯಿಂದ ಜೀವನ ನಡೆಸಲು ಅಥವಾ ತಮ್ಮ ಆಸೆಗಳನ್ನು ಪೂರೈಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಈ ಕಾದಂಬರಿಯು ಕೇವಲ ಬಡ ರೈತನ ಸಮಸ್ಯೆಗಳ ಬಗ್ಗೆ ಬರೆದ ಒಂದು ಕಥೆಯಲ್ಲ. ಬದಲಾಗಿ ಶಿಕ್ಷಿತ ನಗರವಾಸಿಗಳು ಹಾಗೂ ಹಳ್ಳಿಯ ವಿವಿಧ ಜಾತಿಗಳು ಮತ್ತು ವರ್ಗಗಳ ಜನರ ಸಾಮಾಜಿಕ, ಆರ್ಥಿಕ ಜೀವನದ ಕಥೆಯಾಗಿದೆ. ಈ ಕೃತಿಯು ಆರ್ಥಿಕ ಸನ್ನಿವೇಶಗಳನ್ನು ಮೀರಿ ಪರಸ್ಪರ ಸಂಬಂಧಗಳು, ಜಾತಿ,

ವರ್ಗ, ಮಾನದಂಡಗಳು ಹಾಗೆಯೇ ಆದರ್ಶಗಳು, ಪ್ರಾಮಾಣಿಕತೆ ಮತ್ತು ಮೌಲ್ಯಗಳ ಪಾತ್ರ ಹಾಗೂ ಅವಶ್ಯಕತೆಯ ವಿಷಯಗಳ ಮೇಲೆ ಕೇಂದ್ರೀಕರಿಸಿದೆ.

ಗೋದಾನ್ ಕಾದಂಬರಿಯು ಭಾರತೀಯ ರೈತರ ನೋವಿನ ಅಭಿವ್ಯಕ್ತಿಯಾಗಿದೆ. ಭಾರತೀಯ ರೈತರ ನೋವನ್ನು ಅಭಿವ್ಯಕ್ತಿಪಡಿಸಿರುವ ಸಂಪೂರ್ಣ ಕಾದಂಬರಿ. ಈ ಮುಖೇನ ಪ್ರೇಮ್‌ಚಂದ್ ಬ್ರಿಟಿಷ್ ಸಾಮ್ರಾಜ್ಯಶಾಹಿ ವ್ಯವಸ್ಥೆಯ ವಿಮರ್ಶೆಯನ್ನು ಮಾಡಿದ್ದಾರೆ. ಭಾರತದ ಮೇಲೆ ತಮ್ಮ ಆಳ್ವಿಕೆಯನ್ನು ಸ್ಥಾಪಿಸಿದ ನಂತರ ಬ್ರಿಟಿಷರು ಭೂಕಂದಾಯ ವ್ಯವಸ್ಥೆಯಲ್ಲಿ ಮೂಲಭೂತ ಬದಲಾವಣೆಗಳನ್ನು ಮಾಡಿದರು. ಉತ್ಪನ್ನಗಳ ಪಾಲನ್ನು ಭೂಕಂದಾಯವಾಗಿ ತೆಗೆದುಕೊಳ್ಳುವ ಭಾರತೀಯ ಸಂಪ್ರದಾಯವನ್ನು ಕೊನೆಗೊಳಿಸಿದರು. ಹಾಗೆಯೇ ಅದನ್ನು ನಗದುರೂಪದಲ್ಲಿ ತೆಗೆದುಕೊಳ್ಳುವ ವ್ಯವಸ್ಥೆಯನ್ನು ಪರಿಚಯಿಸಿದರು. ಬೆಳೆಯಿರಲಿ, ಇಲ್ಲದಿರಲಿ ರೈತರು ನಿಗದಿತ ಕಂದಾಯವನ್ನು ಪಾವತಿಸಬೇಕಾಗಿತ್ತು. ಈ ವ್ಯವಸ್ಥೆಯಿಂದಾಗಿ ರೈತರು ಸಾಲದ ಹೊರೆಯಿಂದ ಬಳಲುತ್ತಿದ್ದರು. ಪರಿಣಾಮವಾಗಿ ಬಡತನವೇ ಅವರ ಮೂಲ ಆಧಾರಸ್ತಂಭವಾಯಿತು.

ಪ್ರೇಮ್‌ಚಂದ್ ಅವರು ತಮ್ಮ ನೈತಿಕ ಅಸ್ತಿತ್ವವನ್ನು ಉಳಿಸಿಕೊಳ್ಳಲು ನಿರಂತರವಾಗಿ ಹೋರಾಟ ಮಾಡುತ್ತಿರುವ ಹೋರಿ ಮೆಹತೋ ಪಾತ್ರದ ರೂಪದಲ್ಲಿ ಭಾರತೀಯ ರೈತನನ್ನು ಸೃಷ್ಟಿಸಿದ್ದಾರೆ. ಅನೇಕ ಕಷ್ಟಗಳ ನಡುವೆಯೂ ರೈತನಾಗಿ ಉಳಿಯಬೇಕೆಂಬ ಹೋರಿಯ ದೃಢನಿರ್ಧಾರವು ಕಾದಂಬರಿಯನ್ನು ದುರಂತಮಯವನ್ನಾಗಿ ಪರಿವರ್ತಿಸಿದೆ. ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ರೈತರ ಹೋರಾಟಕ್ಕೆ ಧ್ವನಿ ನೀಡುವುದರ ಜೊತೆಗೆ ಈ ಕಾದಂಬರಿಯು ಅದಕ್ಕೆ ಸಂಬಂಧಿಸಿದ ಬಡತನ, ದುಃಖ, ದಾರಿದ್ರ್ಯ, ಯಾತನೆಗಳು, ಅನ್ಯಾಯ ಮತ್ತು ಭೂಮಾಲೀಕರು, ಅಧಿಕಾರಿಶಾಹಿಗಳ ದಬ್ಬಾಳಿಕೆಯನ್ನು ಹೃದಯಸ್ಪರ್ಶಿಯಾಗಿ ಪ್ರದರ್ಶಿಸಿದೆ. ಈ ಕಾರಣಗಳಿಂದಾಗಿ ಈ ಕಾದಂಬರಿ ದುರಂತ ಘಟನೆಗಳ ಐತಿಹಾಸಿಕ ದಾಖಲೆ ಆಗಿದೆ.

ಪ್ರಸಕ್ತ ಕಾದಂಬರಿಯಲ್ಲಿ ಪ್ರೇಮ್‌ಚಂದ್ ರೈತರು, ಕಾರ್ಮಿಕರು ಮತ್ತು ಮಹಿಳೆಯರ ಸಮಸ್ಯೆಗಳನ್ನು ಚಿತ್ರಿಸಿರುವ ರೀತಿ ಆ ಕಾಲಘಟ್ಟದ ಸಮಾಜದ ಸಾಮಾಜಿಕ, ಆರ್ಥಿಕ ಸಮಸ್ಯೆಗಳ ಪ್ರತಿಬಿಂಬ ಮಾತ್ರವಲ್ಲದೆ ಸಮಕಾಲೀನ ಸಮಾಜಕ್ಕೂ ಇಂದಿಗೂ ಪ್ರಸ್ತುತವಾಗಿದೆ. ಪ್ರಸ್ತುತ ಕಾಲಮಾನದಲ್ಲಿಟ್ಟು ಕಾದಂಬರಿಯನ್ನು ಅವಲೋಕಿಸಿದಾಗ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ರೈತರ ಸ್ಥಿತಿಗತಿಗಳು ನಿರೀಕ್ಷಿತ ಪ್ರಮಾಣದಲ್ಲಿ ಬದಲಾವಣೆ ಆಗದೆ ಇರುವುದು ಸ್ಪಷ್ಟ. ರೈತರ ಜೀವನವು ಮುಖ್ಯವಾಗಿ ಆರ್ಥಿಕ ಮತ್ತು ನೈಸರ್ಗಿಕ ತೊಂದರೆಗಳಿಂದ ಆವರಿಸಲ್ಪಟ್ಟಿದೆ. ಪ್ರತಿದಿನ ನಾವು ರೈತರ ದಯನೀಯ ಸ್ಥಿತಿಯನ್ನು ಕಣ್ಣಾರೆ ಕಾಣುತ್ತೇವೆ. ಆರ್ಥಿಕ ಮತ್ತು

ರಾಜಕೀಯ ವ್ಯವಸ್ಥೆಯಿಂದ ಕ್ರೂರವಾಗಿ ದಮನಕ್ಕೆ ಒಳಗಾಗಿರುವ ಅವರ ಸ್ಥಿತಿಯನ್ನು ಸಂಪೂರ್ಣವಾಗಿ ಬದಲಾಯಿಸಲಾಗುವುದಿಲ್ಲ. ಆದ್ದರಿಂದಲೇ ಇಂತಹ ಸಂಕಷ್ಟದ ಪರಿಸ್ಥಿತಿಗಳನ್ನು ಜಯಿಸಲಾಗದೆ ರೈತರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ.

ಗೋದಾನ್ ಕಾದಂಬರಿಯಲ್ಲಿನ ಪಾತ್ರಗಳು ಭಾರತದ ಪ್ರಗತಿಯಲ್ಲಿನ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಗಳನ್ನು ಬಲವಾಗಿ ಪ್ರತಿಪಾದಿಸುತ್ತವೆ. ತಮ್ಮ ಕೌಟುಂಬಿಕ ಜೀವನವನ್ನು ನಿರ್ವಹಿಸಲು ತಯಾರಿರುವ ಹೊಲದಲ್ಲಿ ಕೆಲಸ ಮಾಡುವ ಹೋರಿ ಅಂತಹ ರೈತರಿದ್ದಾರೆ. ಆದರೆ ಇನ್ನೊಂದೆಡೆ ಹಣ ನೀಡಿ ಸಾಲ ವ್ಯವಸ್ಥೆಯ ಮೂಲಕ ಲಾಭಗಳಿಸುವ ಸಮೃದ್ಧ ಐಷಾರಾಮಿ ಜೀವನ ನಡೆಸುವ ಶೋಷಿಸುವ ವರ್ಗವಿದೆ. ಗ್ರಾಮೀಣ ಕೃಷಿಯ ಪ್ರಮುಖ ಸಮಸ್ಯೆ ಏನೆಂದರೆ ಪ್ರತಿಯೊಬ್ಬ ರೈತರು ಸಾಲದ ಸುಳಿಯಲ್ಲಿ ಸಿಲುಕಿದ್ದಾರೆ. ಇವರ ಆತ್ಮಹತ್ಯೆಗಳಿಗೆ ಇದೊಂದೇ ಕಾರಣವಲ್ಲ. ಬೆಳೆ ವೈಫಲ್ಯಗಳು, ಸರಿಯಾದ ಬೆಲೆ ದೊರಕದಿರುವುದು, ಕೃಷಿಯಲ್ಲಿ ಹೊಸ ಉಪಕರಣಗಳ ಬಳಕೆ, ಖಿನ್ನತೆ, ಹತಾಶೆ ಮತ್ತು ಮಾನಸಿಕ ಅಂಶಗಳು ಕೂಡ ಕಾರಣಗಳಾಗಿವೆ. ಗೋದಾನ್ ಕಾದಂಬರಿಯನ್ನು ಕುರಿತು ಅನೇಕ ವಿಮರ್ಶಕರು "ಭಾರತೀಯ ಗ್ರಾಮೀಣ ಜೀವನದ ಸಾಹಸಗಾಥೆ" ಎಂದು ಅಭಿಪ್ರಾಯಪಟ್ಟಿರುವುದು ಸಮರ್ಥನೀಯವಾಗಿದೆ. ಕಥಾನಾಯಕ ಹೋರಿ ಮೆಹತೋ ಅವನು ಸೌಮ್ಯತೆ ಮತ್ತು ಮಾನವೀಯತೆಯ ಮೂಲ ರೂಪದ ಭಾರತೀಯ ರೈತ. ಒಟ್ಟಿನಲ್ಲಿ ಹೋರಿ ಮೆಹತೋ ಆರ್ಥಿಕ, ಸಾಮಾಜಿಕ ನಿರ್ಣಾಯಕತೆಯ ಬಲಿಪಶು. ಹೀಗೆ ಸ್ವಾತಂತ್ರ್ಯ ಪೂರ್ವ ಭಾರತೀಯ ಸಮಾಜದಲ್ಲಿ ಅಸ್ತಿತ್ವದಲ್ಲಿದ್ದ ಸಾಲ ವ್ಯವಸ್ಥೆ, ವರ್ಣ ವ್ಯವಸ್ಥೆ, ಜಮೀನ್ದಾರಿ ವ್ಯವಸ್ಥೆ ಮತ್ತು ರಾಜಕೀಯ ವ್ಯವಸ್ಥೆಗೆ ಸಂಬಂಧಿಸಿದ ಅನೇಕ ಸಮಸ್ಯೆಗಳನ್ನು ಕಾದಂಬರಿ ಅನಾವರಣಗೊಳಿಸಿದೆ. ಪ್ರೇಮ್‌ಚಂದ್ ಅವರ ಈ ಕಾದಂಬರಿಯನ್ನು ಆಧರಿಸಿ ಕನ್ನಡದಲ್ಲಿ ಶ್ರೀಕಾಂತ ಕಕ್ಕೇರಿ ಅವರು 'ಗೋದಾನ್' ಎಂಬ ಹೆಸರಿನಲ್ಲಿಯೇ ನಾಟಕವನ್ನು ರಚಿಸಿದ್ದಾರೆ.

ಪರಾಮರ್ಶನ ಕೃತಿಗಳು:

1. ಮುನ್ಷಿ ಪ್ರೇಮ್‌ಚಂದ್, (2012), ಗೋದಾನ್, ರಾಜ್‌ಕಮಲ್ ಪ್ರಕಾಶನ, ನವದೆಹಲಿ.
2. ನಾಗರಾಜರಾವ್ ಎಚ್.ಎಂ., (1986), ಗೋದಾನ ಒಂದು ಅಧ್ಯಯನ, ಕರ್ನಾಟಕ ವಿಶ್ವವಿದ್ಯಾನಿಲಯ ಪ್ರಕಟಣೆ ವಿಭಾಗ, ಧಾರವಾಡ.
3. ಸುಬ್ರಹ್ಮಣ್ಯ ಎನ್., (2003), ಗೋದಾನ–ವಿಷಯ, ಶೈಲಿ ಮತ್ತು ಪ್ರಭಾವ, ಇಂಪೆಕ್ಸ್ ಪ್ರಕಾಶನ, ಮೈಸೂರು.
4. ವೀಣಾ ಎಸ್. ಬಾಗಲಕೋಟೆ, (2011), ಪ್ರೇಮ್ ಚಂದ್ ಅವರ ಗೋದಾನ: ಸಾಮಾಜಿಕ ಮತ್ತು ಆರ್ಥಿಕ ಅಧ್ಯಯನ, ಮಹರ್ಷಿ ಪ್ರಕಾಶನ, ಬಾಗಲಕೋಟೆ.
5. ಲಕ್ಷ್ಮೀನಾರಾಯಣ ಭಟ್ಟ, (2015), ಗೋದಾನ–ವಿಮರ್ಶಾತ್ಮಕ ಅನ್ವಯ, ನವಚೇತನ ಪ್ರಕಾಶನ, ಬೆಂಗಳೂರು.

Funding:
This study was not funded by any grant.

Conflict of interest:
The Authors have no conflict of interest to declare that they are relevant to the content of this article.

About the License:
© The Authors 2024. The text of this article is open access and licensed under a Creative Commons Attribution 4.0 International License.